ಉದ್ದೇಶ ಹಾಗೂ ಶಕ್ತಿಯನ್ನು ನೀಡಿ ಮುಂದೆ ಸಂಭವಿಸಬಹುದಾದ ಸ್ಟಾರ್‌ವಾರ್ಸ್, ಭೂಗ್ರಹದ ರಕ್ಷಣೆ, ಅನ್ಯಗ್ರಹ ಜೀವಿಗಳಿಂದ ಭೂಮಿಯ ಮೇಲಿನ ಆಕ್ರಮಣ, ಅನ್ಯಗ್ರಹದಲ್ಲಿ ಮನುಷ್ಯನ ವಾಸ, ಅಣುಯುದ್ಧ, ಆಕಾಶ ಕಾಯಗಳ ಘರ್ಷಣೆ, ಪ್ರಾಕೃತಿಕ ಗಂಡಾಂತರಗಳ ಸಂದರ್ಭಗಳಲ್ಲಿ 'ಎಐ' ಆಧರಿತ ಸಲಕರಣೆಗಳು, ಯಂತ್ರಗಳು, ರೊಬೋಗಳು ಹೇಗೆ ನಮಗೆ ನೆರವಾಗಬಲ್ಲವು ಮತ್ತು ಮನುಷ್ಯನ ಸ್ವಾರ್ಥವನ್ನು ಕಂಡು ಹೇಗೆ ತಿರುಗಿ ಬೀಳಬಲ್ಲವು ಎಂಬುದನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದ ನಿರ್ದೇಶಕರ ಆ ಪಾತ್ರಗಳೆಲ್ಲ ಈಗ ನೈಜ ರೂಪ ತಳೆದು ನಮ್ಮಲ್ಲಿ ಅಚ್ಚರಿಮಿಶ್ರಿತ ಮೆಚ್ಚುಗೆ ಮತ್ತು ಭಯ ಎರಡನ್ನೂ ಉಂಟು ಮಾಡಿ ವರ್ಷಗಳೇ ಆಗಿವೆ.

'ಕಾಲವನ್ನು ತಡೆಯೋರು ಯಾರೂ ಇಲ್ಲ' ಎಂಬ ಜನಪ್ರಿಯ ಗೀತೆಯನ್ನು ಕೇಳುತ್ತ ಬೆಳೆದವರು ನಾವು. ಈಗ 'ಕೃತಕ ಬುದ್ಧಿಮತ್ತೆಯನ್ನು ತಡೆಯೋರು ಯಾರೂ ಇಲ್ಲ' ಎಂಬ ಹಾಡು ಶುರುವಾಗಿದೆ. ಜಗತ್ತಿನ ಅರ್ಧಕ್ಕರ್ಧ ದೇಶಗಳು ಕೃತಕ ಬುದ್ಧಿಮತ್ತೆಯ ಉಪಯೋಗ ಪಡೆಯಲು ಸ್ಪರ್ಧೆಗೆ ಬಿದ್ದಿವೆ. ಮನುಷ್ಯನಿಂದಲೇ ರೂಪುಗೊಂಡು, ಅವನಂತೆಯೇ ಯೋಚಿಸಿ, ತರ್ಕಮಾಡಿ ವೇಗವಾಗಿ ಮತ್ತು ಅಚ್ಚುಕಟ್ಟಾಗಿ ಕೆಲಸ ಮಾಡುವ 'ಮಾನವ ತದ್ರೂಪಿ' ನರಯಂತ್ರಗಳ ವಿಜೃಂಭಣೆ ಆರಂಭವಾಗಿದೆ. ಕಲಿಸಿದ್ದನ್ನು ಕಲಿತು, ಹೊಸ ಮಾಹಿತಿ ಕಲೆಹಾಕಿ, ತಾನೇ ಅರ್ಥಮಾಡಿಕೊಂಡು, ಸುತ್ತಲಿನ ಪರಿಸರ, ಭಾಷೆ, ಅನುಕೂಲ, ಅಪಾಯ, ಆಜ್ಞೆ, ಸಂಕೇತಗಳನ್ನು ಬಳಸಿಕೊಂಡು ಥೇಟ್ ಮನುಷ್ಯನಂತೆಯೇ ಕೆಲಸ ಮಾಡುವ ಸಲಕರಣೆಗಳ ಸೃಷ್ಟಿಯ ಬೃಹತ್ ಮಾರುಕಟ್ಟೆ ಸಿದ್ಧಗೊಂಡಿದೆ. ಮನುಷ್ಯನ ವರ್ಚುಯಲ್ ಅಸಿಸ್ಟೆಂಟ್‌ಗಳಂತೆ ಕೆಲಸ ಮಾಡುವ ಕೃತಕ ಬುದ್ಧಿಮತ್ತೆ ಸಲಕರಣೆಗಳು ಈಗಾಗಲೇ ಮೊಬೈಲ್ ಫೋನ್, ಕಂಪ್ಯೂಟರ್ ಹಾಗೂ ಮಲಗುವ ಕೋಣೆಗೂ ಬಂದು ಕೂತಿವೆ.

2012ರಲ್ಲಿ ಸೃಷ್ಟಿಗೊಂಡ 'ಸೋಫಿಯಾ' ಎಂಬ ಮನುಷ್ಯ ರೂಪದ ರೋಬೋ (ರೋಬೋ ಹುಮನಾಯ್ಡ್) ಕಂಪ್ಯೂಟರ್ ಅಥವಾ ಮನುಷ್ಯನ ಆಜ್ಞೆ, ಬೇಡಿಕೆಗಳನ್ನು ಗ್ರಹಿಸಿ, ಅರ್ಥಮಾಡಿಕೊಂಡು ಮಾತನಾಡಿಸಿದವರನ್ನು ಗುರುತಿಸಿ, ಕೇಳಿದ ಪ್ರಶ್ನೆಗೆ ತಕ್ಕದಾದ ಉತ್ತರ ನೀಡುತ್ತದೆ ಮತ್ತು ಕೆಲಸ ಮಾಡುತ್ತದೆ. ಮೆಶೀನ್ ಲರ್ನಿಂಗ್ ಮತ್ತು ಬೃಹತ್ ಮಾಹಿತಿಯೊಂದಿಗೆ ಹಲವು ಸಾಫ್ಟ್‌ವೇರ್ ಪ್ರೋಗ್ರಾಂ ಮೂಲಕ ಜೀವತಳೆದಿರುವ ಸೋಫಿಯಾ ವಿಶ್ವಸಂಸ್ಥೆಯ ಉಪಕಾರ್ಯದರ್ಶಿ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡಿ ಸೈ ಎನಿಸಿಕೊಂಡಿದೆ. ನೂರಕ್ಕೆ ತೊಂಬತ್ತಾರರಷ್ಟು ಸರಿ ಉತ್ತರ ನೀಡುವ ಸಾಮರ್ಥ್ಯ ಹೊಂದಿರುವ ಸೋಫಿಯಾಗೆ ಸೌದಿ ಅರೇಬಿಯಾ ದೇಶ ಗೌರವ ಪೌರತ್ವ ನೀಡಿ ಮನುಷ್ಯನ ಸ್ಥಾನಮಾನ ಕಲ್ಪಿಸಿಕೊಟ್ಟಿದೆ.

ತನ್ನ ವಿಲಕ್ಷಣ ಸಂಶೋಧನಾ ಪ್ರವೃತ್ತಿಯಿಂದ ಮನೆಮಾತಾಗಿರುವ ಎಲಾನ್ ಮಸ್ಕ್‌ನ ಟೆಸ್ಲಾ ಕಂಪನಿಯ 'ಎಐ' ಆಧಾರಿತ ಕಾರು 'ರೋಡ್‌ಸ್ಟರ್' ನಾಸಾ ಹಾರಿಸಿದ ರಾಕೆಟ್‌ನಲ್ಲಿ ಅಂತರಿಕ್ಷಕ್ಕೆ ಹೋಗಿ, ನೌಕೆಯಲ್ಲಿದ್ದುಕೊಂಡೇ ಸೂರ್ಯನ ಸುತ್ತ ಗಿರಕಿ ಹೊಡೆಯುತ್ತಿದೆ. ಈತನೇ ಸೃಷ್ಟಿಸಿದ ಚಾಲಕ ರಹಿತ ಕಾರು ಸಾವಿರಾರು ಕಿಲೋಮೀಟರ್ ಚಲಿಸಿ, ವಾಹನ ಚಾಲನೆಯ ಸ್ವರೂಪವನ್ನೇ ಬದಲಾಯಿಸಿದೆ. ಕೇಳಿದ ಹಾಡನ್ನು ಬಿತ್ತರಿಸುವ ಅಮೆಜಾನ್‌ನ 'ಅಲೆಕ್ಸಾ', ಗೂಗಲ್‌ನ 'ಹೋಮ್ ಅಸಿಸ್ಟೆಂಟ್', ಹೇಳಿದ ವ್ಯಕ್ತಿಗೆ ಫೋನ್‌ಕರೆ ಮಾಡುವ ಆಪಲ್‌ನ 'ಸಿರಿ', ಗೂಗಲ್‌ನ 'ಓಕೆ ಗೂಗಲ್', ಬೇಕಾದಾಗ ಬೇಕೆನಿಸಿದ ಚಿತ್ರವನ್ನು ಫೋನ್ ಮೆಮೊರಿಯಿಂದ ಹೆಕ್ಕಿ ತೆಗೆಯುವ 'ದಿ ರೋಲ್', ಈಸಿಲಿಡೂ, ಸಾಮಾಜಿಕ ಜಾಲ ತಾಣ,



## ಯುದ್ಧ ಮತ್ತು ಶಾಂತಿ

ಕೃತಕ ಬುದ್ಧಿಮತ್ತೆಯನ್ನು ಉಪಯೋಗಿಸಿ ಡ್ರೋನ್ ದಾಳಿ ನಡೆಸುವ ಕೌಶಲ್ಯ ಸಂಪಾದನೆಯ ಉದ್ದೇಶದಿಂದ ಗೂಗಲ್ ಸಂಸ್ಥೆಯು 'ಅಮೆರಿಕದ ರಕ್ಷಣಾ ಇಲಾಖೆಯ ಪೆಂಟಗನ್ ಜೊತೆ 'ಮವೆನ್' ಎಂಬ ಪ್ರಾಜೆಕ್ಟ್‌ಗೆ ಸಹಿಮಾಡಿತ್ತು. ಕೃತಕ ಬುದ್ಧಿಮತ್ತೆಯನ್ನು ವಿಧ್ವಂಸಕ ಹಾಗೂ ಯುದ್ಧಸಂಬಂಧಿ ಕಾರ್ಯಗಳಿಗೆ ಬಳಸುವುದು ಅಪರಾಧ ಮತ್ತು ಅದೊಂದು ನೈತಿಕ ವಿದ್ರೋಹ ಎಂದು ಗೂಗಲ್ ಕಂಪನಿಯ ಕೆಲಸಗಾರರು ಕಂಪನಿಯ ವಿರುದ್ಧ ದನಿ ಎತ್ತಿದರು. ನಾಲ್ಕು ಸಾವಿರ ಜನ ಪ್ರತಿಭಟನೆಗಿಳಿದರು. ಇದಕ್ಕೆ ಮಣಿದ ಗೂಗಲ್ ಒಪ್ಪಂದದಿಂದ ಹಿಂದೆ ಸರಿದು, 'ಇನ್ನು ಮುಂದೆ ಯುದ್ಧ ವ್ಯಾಪಾರ'ಕ್ಕೆ ಒತ್ತಾಸೆ ನೀಡುವ ಕೃತಕ ಬುದ್ಧಿಮತ್ತೆ ಸಾಧನ–ಸಲಕರಣೆಗಳನ್ನು ಯಾವ ಕಾರಣಕ್ಕೂ ತಯಾರಿಸುವುದಿಲ್ಲ, ದಾಳಿರಹಿತ ಉದ್ದೇಶಗಳಿಗೆ ಮಾತ್ರ ತಂತ್ರಜ್ಞಾನ ಸಹಕಾರ ನೀಡುತ್ತೇವೆ ಎಂದು ಘೋಷಿಸಿದೆ.